**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ **03.02.2026.**

**ಪಾಟೀ ಸವಾಲು:-** ಶ್ರೀ ಎಸ್ ಆರ್ ಎಸ್ ಪ್ರತಿವಾದಿಯ ಪರ ವಕೀಲರಿಂದ

ವಾದಿಗಳು ಲೇಟ್ ಮಲ್ಲೇಗೌಡನ ಮಕ್ಕಳು ಎಂದರೆ ಸರಿ. ಸದರಿ ಮಲ್ಲೇಗೌಡರಿಗೆ ಎರಡನೇ ಪ್ರತಿವಾದಿ ಒಬ್ಬನೇ ಗಂಡು ಮಗ ಎಂದರೆ ಸರಿ. ಒಂದನೇ ಪ್ರತಿವಾದಿ ಎರಡನೇ ಪ್ರತಿವಾದಿಯ ತಾಯಿ ಎಂದರೆ ಸರಿ. ಈ ದಾವೆಯನ್ನು 8 ರಿಂದ 9 ಸ್ವತ್ತುಗಳಿಗೆ ದಾವೆ ಹಾಕಿದ್ದಾರೆ. ಸದರಿ ಸ್ವತ್ತುಗಳು ಮಲ್ಲೇಗೌಡರ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು 1 ಸ್ವತ್ತನ್ನು ಮಲ್ಲೇಗೌಡರು ಖರೀದಿಸಿದ್ದು ಉಳಿದ ಸ್ವತ್ತುಗಳು ಇತರೆ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ನುಡಿಯುತ್ತಾರೆ. ಸದರಿ ಖರೀದಿ ಸ್ವತ್ತನ್ನು ಯಾವಾಗ ಮತ್ತು ಯಾರಿಂದ ಖರೀದಿಸಿರುತ್ತಾರೆ ಎಂದು ಗೊತ್ತಿಲ್ಲ. 1-8 ನೇ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಮಲ್ಲೇಗೌಡರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿ ವ್ಯವಸಾಯ ಮತ್ತು ಗಾಣದ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ವಾದಿಗಳ ಮದುವೆಯನ್ನು ಮಲ್ಲೇಗೌಡರೇ ಮಾಡಿರುತ್ತಾರೆ ಎಂದರೆ ಸಾಕ್ಷಿ ಸರಿ ಎಂದು ನುಡಿದು ಎರಡು ಸ್ವತ್ತುಗಳನ್ನು ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ಆ ರೀತಿ 20 ಗುಂಟೆ, 25 ಗುಂಟೆಯನ್ನು 2 ಸರ್ವೆ ನಂಬರ್ ಗಳಲ್ಲಿ ಮಾರಾಟ ಮಾಡಿರುತ್ತಾರೆ. ಒಂದನೇ ವಾದಿಯು 2012 ರಲ್ಲಿ ಅಸಲು ದಾವಾ 656/2012 ಅನ್ನು ಹಾಕಿದ್ದ ಬಗ್ಗೆ ಪ್ರಮಾಣ ಪತ್ರದಲ್ಲಿ ಹೇಳಿದ್ದು ಸದರಿ ದಾವೆ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ದಾವೆಯನ್ನು ಅವರ ತಂದೆ ಮಲ್ಲೇಗೌಡರ ಮಾತಿನಂತೆ ವಾಪಸ್ಸು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಮಲ್ಲೇಗೌಡರು ವಾದಿಗೆ ನಿಮಗೆ ಏನು ಕೊಡಬೇಕು ಕೊಡುತ್ತೇವೆ ಎಂದು ಹೇಳಿ ಆ ದಾವೆಯನ್ನು ವಾಪಸ್ಸು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ನಿಮಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎಂದು ಹೇಳಿದ ಕಾರಣ ಆ ದಾವೆಯನ್ನು ವಾಪಸ್ಸು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಲ್ಲೇಗೌಡರು 2016 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಎಲ್ಲಾ ಸ್ವತ್ತುಗಳನ್ನು ಎರಡನೇ ಪ್ರತಿವಾದಿಗೆ ವಿಲ್ ಮಾಡಿದ್ದು, ಆ ರೀತಿ ಅಸಲು ದಾವಾ 656/2012 ಅನ್ನು ವಾಪಸ್ಸು ತೆಗೆಸಿದ ನಂತರ ಮಲ್ಲೇಗೌಡರು ವಿಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಮಲ್ಲೇಗೌಡರು ತಮ್ಮ ಸೊಸೆ ಮತ್ತು ಮೊಮ್ಮಕ್ಕಳಿಗೆ ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿ ಸೊಸೆ ಮತ್ತು ಮೊಮ್ಮಕ್ಕಳ ಮೇಲೆ ಪ್ರೀತಿ ವಿಶ್ವಾಸ ಹೊಂದಿದ್ದರಿಂದ ದಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ ದಾನ ಪತ್ರವಾಗುವಾಗ ನಾನು ಇದ್ದು ಅವುಗಳಿಗೆ ಸಹಿ ಮಾಡಿರುವುದಿಲ್ಲ. ಸದರಿ ಮಲ್ಲೇಗೌಡರನ್ನು ಮಲ್ಲಪ್ಪ ಎಂದು ಊರಿನಲ್ಲಿ ಕರೆಯುತ್ತಿದ್ದರು ಎಂದರ ಸರಿ. ಐಟಂ ನಂಬರ್ 5 ಮತ್ತು 9 ಅನ್ನು 10ನೇ ಪ್ರತಿವಾದಿಗೆ ಮಲ್ಲೇಗೌಡರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರ ನೊಂದಣಿಯಾಗಿರುತ್ತದೆ. ನಾನು ಹೇಳಿದಂತೆ ಯಾವುದೇ ನೊಂದಾಯಿತ ಕ್ರಯಪತ್ರ ಆಗಿರುವುದಿಲ್ಲ ಹಾಗೂ ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಆ ರೀತಿ ಕರಾರು ಪತ್ರಗಳನ್ನು 10ನೇ ಪ್ರತಿವಾದಿಗೆ ಮಲ್ಲೇಗೌಡರು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ದಾವಾ ಸ್ವತ್ತುಗಳು ಒಟ್ಟು ಕುಟುಂದ ಆದಾಯದಿಂದ ಖರೀದಿಸಿದ ಹಾಗೂ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ಅವುಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಪ್ರತಿವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ 656/2012 ಅನ್ನು ವಾಪಸ್ಸು ತೆಗೆದು ನಂತರ ಮತ್ತು ಮಲ್ಲೇಗೌಡರ ವಯಸ್ಸನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಲ್ ಮತ್ತು ದಾನ ಪತ್ರಗಳನ್ನು ಮಲ್ಲೇಗೌಡರಿಂದ ಎರಡನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳಿಗೆ ಸೃಷ್ಟಿಸಿಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ಎರಡನೇ ಪ್ರತಿವಾದಿಯ ವಿಶ್ವಾಸದಿಂದ ಇರುವ ಕಾರಣದಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದ್ದು ಮುಂದೂಡಲಾಯಿತು**

**ಮರುವಿಚಾರಣೆಃ ಇಲ್ಲ**
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ **03.02.2026**